

ಎಡದಿಂದ ಬಲಕ್ಕೆ:

1. ಸಂತರ ಆಸೆಗಳು ಪ್ರಸ್ತುತ ವಿಷಯಕ್ಕೆ ಸಂಬಂಧಿಸಿಲ್ಲ 4
3. ಸ್ವಂತ ವಾಸಕ್ಕೆಂದು ನಿರ್ಮಿತಿಗೊಂಡದ್ದು ಈ ಮನೆ 3
7. ಬಂಡೆ ಏರಿ ನಿಂತು ಬಂದವರದು ಬರೀ ಜಂಭದ ಮಾತು 4
8. ಸಿತಾರ್ ಅಭ್ಯಾಸಕ್ಕೆ ಕೂರಲು ಇಂಥ ಚಾವಣಿಯೇ ಆದೀತೇ? 3
9. ಕಪ್ಪು ಬಣ್ಣದ್ದು; ಆನೆ ಮರಿಯೂ ಹೌದು 2
12. ಸರಸ್ವತಿಯ ಆರಾಧನೆಯಲ್ಲಿ ತೊಡಗಿದ್ದಾಳೆ ಆಕೆಯ ಮಗಳು 2
14. ವಿರೋಧಿಗಳನ್ನು ಸುಮ್ಮನಿರಿಸಲೂ ಶುಲ್ಕವೇ? 3
15. ಸದಾ ರಂಪ ಮಾಡುತ್ತಿರುತ್ತಾನೆ; ಹೆಸರು ಮಾತ್ರ 'ಲಕ್ಷ್ಮಿಯ ಗಂಡ' 4
17. ಈ ವರದಿ ವಾಸ್ತವಕ್ಕೆ ವ್ಯತಿರಿಕ್ತವಾಗಿದೆ 3
18. ಆಂತರಿಕ ವಿಷಯಗಳಿಗೆಲ್ಲ ತಲೆ ಹಾಕುವುದು ವೈಪರೀತ್ಯವೇ ಸರಿ 4

ಮೇಲಿಂದ ಕೆಳಕ್ಕೆ:

1. ಆ ದೇಶದ ಅವನತಿಯ ವೇಗ ವಿಪರೀತ 2
2. ಗಾರುಡಿ ವಿದ್ಯೆ ಕಲಿಯಲು ಹೊರಟು ಕುಸ್ತಿಮನೆ ಸೇರಿದ 3
4. ಸರ್ವರನ್ನೂ ಜಯಿಸಿ ಬಂದವನಿಗೆ ಬಹುಮಾನ ಕೊಳದಲ್ಲಿ ಹುಟ್ಟಿ ಬಂದ ಕುಸುಮ 4
5. ಅವನ ಕುಮಾರನ ಒಂದೊಂದು ಕೃತ್ಯವೂ ಅಪಾಯಕರ 3
6. ಸಂತೈಸು ಎಂದು ಹೇಳಿದ್ದನ್ನು ಕಾಟಕೊಡು ಎಂದುಕೊಂಡರೆ ಹೇಗೆ? 4
10. ಕರೀ ಮಣಿ ತಂದು ಮಾರಿ ಸಾಲದಿಂದ ಹೊರಬಂದ 4
11. ನಂಬುವವರು ಮಾತ್ರ ಬಳಸುತ್ತಾರೆ ಸಸ್ಯ ದಾರ ಮತ್ತು ನೀರು ಹೀರುವ ಅಂಗ 4
13. ತೇರನ್ನೆಳೆವ ಮಾರ್ಗವನ್ನೆಲ್ಲ ಖಾಲಿ ಮಾಡಬೇಕಲ್ಲ? 3
16. ದಂಪತಿಗಳ ಮೆರವಣಿಗೆ ಅಲ್ಲಿನ ಸಂಪ್ರದಾಯ 3
17. ಕೋವಿ ಹಿಡಿದವರನ್ನು ಕಂಡೊಡನೆ ಪದ್ಯಕಾರ ತಲೆಕೆಳಗು 2

---

## 26–11– 2020 ಉತ್ತರಗಳು

ಎಡದಿಂದ ಬಲಕ್ಕೆ:

1. ಕೌಟುಂಬಿಕ 3. ಹಳತು 4. ವಸನ 6. ಕಳವಳ 7. ಮಕುಟ 9. ಉಸುಕು 11. ಮಸುಕು 13. ನಕುಲ 15. ಮಹನೀಯ 17. ನಜರು 18. ಯಾಚಕ 19. ಕರಾಮತಿ

ಮೇಲಿಂದ ಕೆಳಕ್ಕೆ:

1. ಕೌತುಕ 2. ಕವಳ 3. ಹರುಕು 5. ನಮಿಸು 7. ಮಧ್ಯಮ 8. ಟಕ್ಕುಕು (=ಕುಕ್ಕುಟ ತಲೆಕೆಳಗು) 9. ಉದ್ಯಾನ 10. ಕುಶಲ 12. ಸುಮನ 14. ಕುಹಕ 15. ಮರುಕ 16. ಯಯಾತಿ

ಪ್ರಶ್ನಾಂಕಣ

# ಕಪ್ಪೆ: ಅಳಿವ ಹಾದಿಯಲ್ಲಿ ಏಕೆ?

ಕಪ್ಪೆ, ಅದು ಅತ್ಯಂತ ಪ್ರಸಿದ್ಧ ಉಭಯವಾಸಿ (ಚಿತ್ರ ನೋಡಿ). ಉಭಯವಾಸಿಗಳಲ್ಲೆಲ್ಲ ಕಪ್ಪೆಗಳದೇ ಗರಿಷ್ಠ ವಿಧ, ಪ್ರಭೇದ. ಈ ವರೆಗೆ ಗುರುತಿಸಲಾಗಿರುವ ಕಪ್ಪೆ ಪ್ರಭೇದಗಳ ಸಂಖ್ಯೆ 7265. ಉಷ್ಣ ವಲಯ ಮತ್ತು ಸಮ ಶೀತೋಷ್ಣ ವಲಯಗಳಲ್ಲಿ ಅಡವಿಗಳಲ್ಲಿ, ವೃಷ್ಟಿ ವನಗಳಲ್ಲಿ, ಕೆರೆ ಕುಂಟೆ ಸರೋವರಗಳಂತಹ ಜಲಾವಾರಗಳ ಸನಿಹದಲ್ಲಿ ಅವುಗಳದು ಪ್ರಧಾನ ನೆಲೆ.

ಭೂ ನೆಲವನ್ನು ಆಶ್ರಯಿಸಿರುವ ಜೀವ ಜಾಲದ ಸಮತೋಲನದಲ್ಲಿ ಕಪ್ಪೆಗಳದು ತುಂಬ ಮಹತ್ವದ ಪಾತ್ರ. ಸರ್ಪಗಳಿಗೆ ಮತ್ತು ಸಾವಿರಾರು ಹಕ್ಕಿ ಪ್ರಭೇದಗಳಿಗೆ ಕಪ್ಪೆಗಳೇ ಪ್ರಮುಖ ಆಹಾರ. ಪಿಡುಗುಕಾರಕ ಕೀಟಗಳ ಸಂಖ್ಯಾ ನಿಯಂತ್ರಣದಲ್ಲೂ ಕಪ್ಪೆಗಳದು ಅತ್ಯಂತ ಮುಖ್ಯ ಪಾತ್ರ. ಆದರೆ ಕೆಲವು ವರ್ಷಗಳಿಂದ ಈಚೆಗೆ ಕಪ್ಪೆಗಳು ಭಾರೀ ಸಂಕಷ್ಟದಲ್ಲಿವೆ; ನಾನಾ ವಿಧ ತ್ರಾಸಗಳಿಗೆ ಸಿಲುಕಿ ವಿನಾಶದ ಹಾದಿ ಹಿಡಿದಿವೆ. ಸುಮಾರು ಎರಡು ನೂರು ಪ್ರಭೇದಗಳು ಶಾಶ್ವತವಾಗಿ ಕಣ್ಮರೆಯಾಗಿವೆ. ಶೇಕಡ 71 ರಷ್ಟು ಪ್ರಭೇದಗಳು (ಎಂದರೆ 5,000 ಕ್ಕೂ ಸ್ವಲ್ಪ ಅಧಿಕ ಸಂಖ್ಯೆಯಷ್ಟು ಪ್ರಭೇದಗಳು) ಅಳಿದುಹೋಗುವ ಹಾದಿಯಲ್ಲಿವೆ ; ವರ್ಷದಿಂದ ವರ್ಷಕ್ಕೆ ಈ ಸಂಖ್ಯೆ ಹೆಚ್ಚುತ್ತಲೂ ಇದೆ! ಏಕೆ ಹೀಗೆ?

ಅದಕ್ಕೆ ಹಲವಾರು ಕಾರಣಗಳಿವೆ, ಪ್ರಮುಖವಾಗಿ:

- ಇತ್ತೀಚಿನ ವರ್ಷಗಳಲ್ಲಿ ಜಗದಾದ್ಯಂತ 'ಕೈಟ್ರಿಡ್ ಫಂಗಸ್' ಎಂಬೊಂದು ರೋಗಕಾರಕ ಶಿಲೀಂಧ್ರ ಕಪ್ಪೆಗಳ ಮೇಲೆ ಧಾಳಿ ಇಟ್ಟಿದೆ. ಧೂಳಿನಂತಹ 'ಬೀಜ ಕಣ'ಗಳ ಮೂಲಕ ಗಾಳಿಯಲ್ಲಿ ಹರಡಿ ಕಪ್ಪೆಗಳ ತೇವಭರಿತ ಚರ್ಮದ ಮೇಲೆ ನೆಲೆ ಹಿಡಿದು ಬೆಳೆದು ಚರ್ಮವನ್ನಿಡೀ ಆವರಿಸುವ ಈ ಶಿಲೀಂಧ್ರ ಕಪ್ಪೆಗಳ ಉಸಿರುಗಟ್ಟಿಸುತ್ತದೆ; ಪ್ರಾಣವನ್ನು ತೆಗೆಯುತ್ತಿದೆ (ಕಪ್ಪೆಗಳು ಚರ್ಮದ ಮೂಲಕ ಉಸಿರಾಡುತ್ತವೆ ಎಂಬುದು ನಿಮಗೂ ಗೊತ್ತಲ್ಲ?). 'ಕೈಟ್ರಿಡೋಮೈಕೋಸಿಸ್' ಎಂಬ ಈ ಕಾಯಿಲೆ ಕಪ್ಪೆಗಳ ಮಹಾನ್ ಶತ್ರು ಆಗಿದೆ.



- ಮಾನವರ ಚಟುವಟಿಕೆಗಳ ಪರಿಣಾಮವಾಗಿ ಅಪಾರ ಪ್ರಮಾಣದ 'ಹಸಿರು ಮನೆ ಅನಿಲಗಳು' ಭೂ ವಾಯುಮಂಡಲವನ್ನು ಸೇರಿ 'ಓಜೋನ್ ಪದರ'ವನ್ನು ಅಲ್ಲಲ್ಲಿ ತೆಳ್ಳಗಾಗಿಸಿವೆ; ಕೆಲವೆಡೆ ಛಿದ್ರಗೊಳಿಸಿವೆ ಕೂಡ. ತತ್ಪರಿಣಾಮವಾಗಿ ಸೂರ್ಯನಿಂದ ಬಂದು ಭೂ ನೆಲವನ್ನು ತಲುಪುವ 'ಅತಿ ನೇರಳೆ ಕಿರಣ'ಗಳ ಪ್ರಮಾಣ ಅಧಿಕಗೊಂಡಿದೆ. ಈ ಅಪಾಯಕಾರೀ ವಿಕಿರಣದಿಂದ ಕಪ್ಪೆ ಮೊಟ್ಟೆಗಳು ಹಾನಿಗೊಂಡು, ಹುಟ್ಟುವ ಮೊದಲೇ ನಾಶಗೊಂಡು ಕಪ್ಪೆಗಳ ಸಂತತಿ ತೀವ್ರವಾಗಿ ಕ್ಷೀಣಿಸುತ್ತಿದೆ.
- ಕೃಷಿ ಭೂಮಿಯಲ್ಲಿ ವಿಪರೀತವಾಗಿ ಬಳಕೆಗೊಳ್ಳುತ್ತಿರುವ ನಾನಾ ವಿಧ ಉಗ್ರ ಕೀಟನಾಶಕ ವಿಷಗಳು ಕಪ್ಪೆಗಳು ವಾಸಿಸುವ ಜಲಾವಾರಗಳಿಗೂ ಬೆರೆಯುತ್ತಿವೆ; ಕಪ್ಪೆಗಳ, ಕಪ್ಪೆ ಮರಿಗಳ ಜೀವ ತೆಗೆಯುತ್ತಿವೆ. ಜೊತೆಗೆ ಅರಣ್ಯ ನಾಶ, ಕೆರೆಕುಂಟೆಗಳ ಕಣ್ಮರೆ, ಅನ್ಯ ಪ್ರಾಣಿಗಳ ಹಾವಳಿ ಹಾಗೂ ಮನುಷ್ಯರ ಜಿಹ್ವಾ ಚಾಪಲ್ಯ ಇಂತಹ ಹಲವಾರು ಕಾರಣಗಳಿಂದಲೂ ಕಪ್ಪೆಗಳ ಸಂಖ್ಯೆ ಕ್ಷಿಪ್ರವಾಗಿ ಕ್ಷೀಣಿಸುತ್ತಿದೆ . ಇವೆಲ್ಲದರ ಪರಿಣಾಮವಾಗಿ ಜಗದಾದ್ಯಂತ ಕಪ್ಪೆಗಳು ವಿನಾಶದ ಹಾದಿ ಹಿಡಿದಿವೆ.

■ ಎನ್‌. ವಾಸುದೇವ್